ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

<u>ಸಿ.ಸಿ.ನಂ.**272/2020.**</u>

ದಿನಾಂಕಃ**05.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ವಿನಾಯಕ ಭಟ್ | ಚಾಸಾ-5, ಪ್ರಾಸಾ-6 |
| ತಂದೆಯ ಹೆಸರು | ಸುಬ್ಬಾಭಟ್ | |
| ವಯಸ್ಸು | 54 | |
| ಉದ್ಯೋಗ | ಅರ್ಚಕರು | |
| ವಾಸ | ಕಡೂರು ಟೌನ್ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಮೊದಲು ವಾಸವಿ ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸಮಾಡಿಕೊಂಡು ಸದರಿ ದೇವಸ್ಥಾನಕ್ಕೆ ಒತ್ತಾಗಿ ಇರುವ ಮನೆಯ ವಾಸವಾಗಿದ್ದೆ. ಸುಮಾರು 8-9 ವರ್ಷಗಳ ಹಿಂದೆ ಒಂದು ದಿನ ಸಂಜೆ ಸುಮಾರು 7-45 ರ ಸಮಯದಲ್ಲಿ ನಾನು ದೇವಸ್ಥಾನದ ಮುಂದಿನ ಕಟ್ಟೆಯ ಮೇಲೆ ಕುಳಿತಿದ್ದಾಗ ಒಬ್ಬರು ಅಜ್ಜಿ ಕೂಗಾಡುತ್ತಿದ್ದರು, ಕೂಗಾಟ ಕೇಳಿ ನಾನು ಹೋಗಿ ವಿಚಾರಿಸಿದಾಗ ಅವರು ಹೋಯಿತು ಹೋಯಿತು ಎಂದು ಕೂಗಾಡುತ್ತಿದ್ದರು, ನಾನು ಹೋಗಿ ವಿಚಾರಿಸಿದಾಗ ನನ್ನ ಚಿನ್ನದ ಸರ ಕಿತ್ತುಕೊಂಡರು ಎಂದು ತಿಳಿಸಿರುತ್ತಾರೆ ಹಾಗೂ ಸದರಿ ಸರ ಸುಮಾರು 95 ರಿಂದ 100 ಗ್ರಾಂ ಇತ್ತು ನನ್ನ ಮಗ ಕೊಡಿಸಿದ್ದ, ಅದನ್ನೆ ಕಿತ್ತುಕೊಂಡು ಹೋದರು ಎಂದು ಅಳುತ್ತಿದ್ದರು. ಈ ಕೃತ್ಯದ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿ ಸಹಿ ಮಾಡಿರುತ್ತೇನೆ.

<u>ಪಾಟೀಸವಾಲುಃ **1** ನೇ ಆರೋಪಿ ಪರ ಶ್ರೀ. ಎನ್ ಎಸ್ ವಕೀಲರಿಂದಃ</u>

ಚಾಸಾ1 ನನಗೆ ಪರಿಚಯಸ್ಥರು. ಚಾಸಾ 1 ರವರ ಅಂಗಡಿಯು ನಮ್ಮ ದೇವಸ್ಥಾನದಿಂದ ಸುಮಾರು ಕಾಲು ಕಿ ಮೀ ದೂರದಲ್ಲಿ ಇದೆ. ಚಾಸಾ 1 ರವರ ಮಗ ನನಗೆ ಪರಿಚಯಸ್ಥರು ಎಂದರೆ ಸರಿ. ಚಾಸಾ 1 ರವರ ಕುಟುಂಬದ ನನಗೆ ಸು.15 ವರ್ಷಗಳಿಂದ ಪರಿಚಯ. ನಾನು ದೇವಸ್ಥಾನದ ಕಟ್ಟೆಯ ಮೇಲೆ ಕುಳಿತಿದ್ದಾಗ ಯಾರೋ ಬಂದು ಸರ ಕಿತ್ತುಕೊಂಡರು ಎಂದು ಹೇಳಿಕೆ ನೀಡಿರುತ್ತೇನೆ. ಆ ರೀತಿ ಹೇಳಿಕೆಯನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದರು. ಸದರಿ ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ, ಒಂದು ಪೇಪರ್ ಗೆ ಸಹಿ ಮಾಡಿರುತ್ತೇನೆ.

ಅದರಲ್ಲಿ ಬರೆದಿದ್ದ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಚಾಸಾ 1 ರವರ ಸರ ತೂಕ ಮಾಡಿಸಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರದೇ ಇದ್ದರು ಸಹಃ ಚಾಸಾ 1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ ದಾಖಲೆಗಳು ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

<u>ಪಾಟೀಸವಾಲುಃ **2** ನೇ ಆರೋಪಿ ಪರ ಶ್ರೀ**.** ಕೆ ಎಸ್ ಆರ್ ವಕೀಲರಿಂದಃ</u>

ಶ್ರೀ**.** ಕೆ ಎಸ್ ಆರ್ ವಕೀಲರು ತಮ್ಮ ಪರವಾಗಿನ ಪಾಟೀ ಸವಾಲನ್ನಾಗಿ ಈ ಮೇಲೆ ಶ್ರೀ ಎನ್ ಎಸ್ ವಕೀಲರು ಮಂಡಿಸಿರು ಪಾಟೀ ಸವಾಲನ್ನು ಅನುಮೋದಿಸುವಂತೆ ಕೋರಿರುತ್ತಾರೆ**.** ವಕೀಲರ ಮನವಿಯನ್ನು ಪುರಸ್ಕರಿಸಲಾಗಿರುತ್ತದೆ**.**

<u>ಮರು ವಿಚಾರಣೆ ಃ ಇಲ್ಲ</u>

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು**)**

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.